# ಪರಿಸರ ಕಾಳಜಿ ಹವಾಮಾನ ಬದಲಾವಣೆಯ ವಿಚಾರಗಳು

**ಶಶಿಕಲಾ ಯು.***

**DOI: https://doi.org/10.5281/zenodo.22301696**

**ABSTRACT**

ಮಾನವನ ಅತಿಯಾದ ಕೈಗಾರಿಕೀಕರಣ, ನಗರೀಕರಣ ಮತ್ತು ಪ್ಲಾಸ್ಟಿಕ್ ಬಳಕೆಯಂತಹ ಅವೈಜ್ಞಾನಿಕ ಚಟುವಟಿಕೆಗಳು ಪ್ರಕೃತಿಯ ಸಮತೋಲನವನ್ನು ತೀವ್ರವಾಗಿ ಕದಡುತ್ತಿವೆ. ಇದರಿಂದಾಗಿ ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆ, ಮೇಘಸ್ಫೋಟ, ಭೂಕುಸಿತ ಹಾಗೂ ಮರುಭೂಮೀಕರಣದಂತಹ ವಿನಾಶಕಾರಿ ಪ್ರಾಕೃತಿಕ ವಿಕೋಪಗಳು ಎದುರಾಗುತ್ತಿವೆ. ಪಶ್ಚಿಮಘಟ್ಟಗಳ ನಾಶ, ಅರಣ್ಯನಾಶ ಹಾಗೂ ಕೃಷಿಯಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯು ಜೈವಿಕ ಆಹಾರ ಸರಪಳಿಯನ್ನು ಕತ್ತರಿಸಿ ಜೀವಸಂಕುಲವನ್ನು ಅಳಿವಿನಂಚಿಗೆ ನೂಕಿದೆ. ಸಮಸ್ತ ಜೀವಿಗಳಿಗೂ ಆಸರೆಯಾಗಿರುವ ಏಕೈಕ ಗ್ರಹವಾದ ಭೂಮಿಯನ್ನು ರಕ್ಷಿಸಿಕೊಳ್ಳಲು ಪರಿಸರ ಜಾಗೃತಿ ಇಂದು ಅತ್ಯಗತ್ಯವಾಗಿದೆ. ಇಂಗಾಲದ ಹೊರಸೂಸುವಿಕೆ ತಗ್ಗಿಸುವುದು, ಪರಿಸರ ಸ್ನೇಹಿ ವಾಹನಗಳ ಬಳಕೆ, ಕಾಡುಗಳ ಸಂರಕ್ಷಣೆ ಹಾಗೂ ಹಸಿರು ಹೊದಿಕೆ ಹೆಚ್ಚಿಸುವ ಮೂಲಕ ನಾವು ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯದಲ್ಲಿ ಇಡೀ ಜೀವಜಾಲವೇ ನಾಶವಾಗುವ ಅಪಾಯವಿದೆ. ಆದ್ದರಿಂದ, ಪರಿಸರ ಕಾಳಜಿ ಬೆಳೆಸಿಕೊಂಡು ಭೂಮಿಯ ನೈಸರ್ಗಿಕ ಸಮತೋಲನವನ್ನು ಕಾಪಾಡುವುದು ಪ್ರತಿಯೊಬ್ಬರ ತುರ್ತು ಜವಾಬ್ದಾರಿಯಾಗಿದೆ ಎನ್ನುವುದನ್ನು ಇಲ್ಲಿ ಗಂಭೀರವಾಗಿ ಚರ್ಚಿಸಲಾಗಿದೆ.

**KEYWORDS:** ಪರಿಸರ ಕಾಳಜಿ, ಹವಾಮಾನ ಬದಲಾವಣೆ, ಜಾಗತಿಕ ತಾಪಮಾನ, ಪಶ್ಚಿಮಘಟ್ಟಗಳು, ಪ್ರಾಕೃತಿಕ ಸಮತೋಲನ.

* **ಡಾ. ಶಶಿಕಲಾ ಯು.**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸೈಂಟ್ ಕ್ಲಾರೆಟ್ ಕಾಲೇಜು (ಸ್ವಾಯತ್ತ ), ಜಾಲಹಳ್ಳಿ, ಬೆಂಗಳೂರು.

ಮಾನವ ಹುಟ್ಟಿನಿಂದ ಚಟ್ಟದವರೆಗೆ ಪರಿಸರದಲ್ಲಿ ತನ್ನ ಚಟುವಟಿಕೆಗಳನ್ನು ಸಾಗಿಸಿಕೊಂಡು ಹೋಗುತ್ತಿರುವನು. ಅದು ಅವನಿಗೆ ಅನಿವಾರ್ಯ, ಅವಶ್ಯ, ಅಲ್ಲದೆ ಮಾನವ ಮಾತ್ರ ಅಲ್ಲ ಎಲ್ಲಾ ಜೀವಿಗಳೂ ಸಹ ಪರಿಸರವನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ. ಇದು ನಿತ್ಯ ನಿರಂತರವಾದ ಪ್ರಕ್ರಿಯೆ, ಇದರಿಂದ ಮುಕ್ತವಾಗಲು ಸಾಧ್ಯವಿಲ್ಲ. ಕಾರಣ ಇರುವುದೊಂದೇ ಭೂಮಿ. ಎಲ್ಲಾ ಜೀವಿಗಳೂ ಭೂಮಿಯ ಕೊಡುಗೆಗಳು, ಈ ಗ್ರಹವಲ್ಲದೆ ಬೇರೆಲ್ಲಿಯೂ ಸಹ ನಾವು ಬದುಕಲು ಸಾಧ್ಯವಿಲ್ಲ, ಹಾಗಾಗಿ ಈ ಗ್ರಹದಲ್ಲಿ ಬದುಕುವ ಹಕ್ಕು ಎಲ್ಲರಿಗೂ ಇದೆ. ಅದನ್ನು ಕಿತ್ತುಕೊಳ್ಳಲು ಯಾರಿಂದಲೂ ಸಹ ಸಾಧ್ಯವಿಲ್ಲ, ಅದೇ ನಮ್ಮ ಪರಿಸರ.

ಇಂದು ಪರಿಸರದಲ್ಲಿ ಹವಾಮಾನ ಬದಲಾವಣೆಯ ವೇಗ ಹೆಚ್ಚುತ್ತಿದೆ. ಮಾನವನ ಚಟುವಟಿಕೆಗಳು ಹೆಚ್ಚಾಗಿ ಯಂತ್ರಗಳನ್ನು ಅವಲಂಬಿಸಿದೆ. ಅಲ್ಲದೆ ಮಾನವನ ಕೆಲಸಗಳಲ್ಲಿನ ಅನಾಗರಿಕತೆ, ಯುದ್ಧ, ಕೈಗಾರಿಕರಣದಿಂದ, ಅತೀಯಾದ ನಗರಿಕರಣದಿಂದ ದಿನದಿಂದ ದಿನಕ್ಕೆ ಪರಿಸರದ ಮೇಲೆ ಹಾನಿಗೆ ಕಾರಣವಾಗುತ್ತಿದೆ. ಅಲ್ಲದೆ ಇದು ಹವಾಮಾನ ಬದಲಾವಣೆಗೂ ಸಹ ಕಾರಣವಾಗುತ್ತಿದೆ. ಇದು ಪರಿಸರದ ಎಲ್ಲಾ ಜೀವಿಗಳ ಮೇಲೆ ಪ್ರಭಾವ ಬೀರುತ್ತಿದೆ. ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳದೇ ಹೋದರೆ ಮುಂದೆ ಅನಾಹುತವನ್ನು ಎದುರಿಸಬೇಕಾಗುತ್ತದೆ. ಜೀವಸಂಕುಲಕ್ಕೆ ಆಸರೆಯಾಗಿರುವ ಭೂಮಿಯನ್ನು ನಾವು ನಿರ್ಜೀವಮಾಡಹೊರಟಿದ್ದೇವೆ.

**ಗುರಿಗಳು:**

- ಪರಿಸರದ ಬಗ್ಗೆ ಕಾಳಜಿಹೊಂದುವುದು
- ಪರಿಸರಕ್ಕಾಗುವ ಹಾನಿಯ ಬಗ್ಗೆ ಅರಿವು ಮೂಡಿಸುವುದು
- ಪರಿಸರಹಾನಿಯಿಂದ ಜೀವಿಗಳಿಗಾಗುವ ಹಾನಿ
- ಹವಾಮಾನ ಬದಲಾವಣೆಯ ಬಗ್ಗೆ ಅರಿವು

**ಉದ್ದೇಶ**

- ಹವಾಮಾನ ಬದಲಾವಣೆಯ ಕಾರಣಗಳನ್ನು ತಿಳಿಯುವುದು
- ಹವಾಮಾನ ಬದಲಾವಣೆಯ ಪರಿಣಾಮಗಳ ಬಗ್ಗೆ ಅರಿವು
- ಪರಿಹಾರ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು
- ಪರಿಸರದ ಮೇಲಿನ ಅವಲಂಬನೆಯ ಅರಿವು

**ಅಧ್ಯಯನದ ವಿಧಾನ**

ಪರಿಸರವನ್ನು ರಕ್ಷಿಸುವ ನಿಟ್ಟಿನಲ್ಲಿ ಇಂದು ಹಲವಾರು ಸಂಘ ಸಂಸ್ಥೆಗಳು

ಹುಟ್ಟಿಕೊಂಡು, ಕಾರ್ಯನಿರ್ವಹಿಸುತ್ತಿವೆ. ಆದುದರಿಂದ ಇಂದು ಈ ಜಾಗೃತಿ ಎಲ್ಲರಲ್ಲಿಯೂ ಮೂಡುವುದು ಅತ್ಯವಶ್ಯ. ಪರಿಸರ ಮಾಲಿನ್ಯ ಇಡೀ ಪ್ರಪಂಚವನ್ನೇ ಆವರಿಸಿರುವ ಒಂದು ದೊಡ್ಡ ಸಮಸ್ಯೆ. ಕೆಲವು ಮುಂದುವರೆದ ರಾಷ್ಟ್ರಗಳು ತಮ್ಮ ಪರಿಸರಕ್ಕೆ ಹಾನಿಮಾಡುವ ಕೈಗಾರಿಕೆಗಳನ್ನು ಬೇರೆ ರಾಷ್ಟ್ರಗಳಿಗೆ ಆರ್ಥಿಕ ನೆರವು ಎಂಬ ಹೆಸರಿನಿಂದ ಸಾಗು ಹಾಕಿ ತಮ್ಮ ಲಾಭದ ಮಟ್ಟವನ್ನು ವೃದ್ಧಿಸಿಕೊಳ್ಳುತ್ತಿವೆ. ಈ ಬಗೆಯ ಆರ್ಥಿಕ ವ್ಯವಸ್ಥೆ ಬದಲಾಗಬೇಕು.

ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಅಧಿಕವಾಗಿರುವುದು ಒಂದು ಕಾರಣವಾಗಿದೆ. ಇಂದು ಅತಿಯಾಗಿ ನಾವು ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದರಿಂದ ಅದರ ತ್ಯಾಜ್ಯ ಹೊರಹಾಕುವುದು ಒಂದು ಸವಾಲಾಗಿದೆ. ಇದರ ಬಳಕೆಯನ್ನು ಈಗ ಸರ್ಕಾರ ನಿಷೇಧಿಸಿದೆ. ಆದರೂ ಅದರ ಬಳಕೆ ನಡೆಯುತ್ತಲೇ ಇದೆ. ಈ ಬಗೆಯ ಅರಿವು ನಮಗೆ ಮುಖ್ಯ. ನಾವು ಇಂದಿನ ಈ ಪರಿಸರ ಮಾಲಿನ್ಯಕ್ಕೆ ಕಾರಣ ಅತಿಯಾದ ಕೈಗಾರಿಕೆಗಳು, ಯಂತ್ರಗಳು ಕಾರಣವಾಗಿವೆ. ಅತಿಯಾದ ಜನಸಂಖ್ಯೆ, ಅಸುರಕ್ಷಿತ ಸಾರಿಗೆ ವ್ಯವಸ್ಥೆ, ನಾವು ಬಳಸುವ ಗಾಳಿ ಸಹ ಎಲ್ಲವೂ ಮಾಲಿನ್ಯವಾಗಿದೆ. ನಾವು ನಿಂತ ನೆಲ ಎಷ್ಟರ ಮಟ್ಟಿಗೆ ಶುದ್ಧವಾಗಿದೆ ಎಂದು ಕೇಳಿದರೆ ಉತ್ತರ ಸಿಗದು. ಇದರ ಪರಿಣಾಮವನ್ನು ನಮ್ಮ ಸುತ್ತಲಿರುವ ಜೀವಿಗಳೂ ಸಹ ಇದರ ಪರಿಣಾಮಗಳನ್ನು ಅನುಭವಿಸುತ್ತಲಿವೆ. ಇದನ್ನು ಸರಿಪಡಿಸಲು ಕಾನೂನು ರೀತಿಯ ಹೋರಾಟಗಳಾಗಬೇಕು. ಎಲ್ಲಾ ಜನಸಾಮಾನ್ಯರಲ್ಲಿ ಈ ಬಗೆಯ ಅರಿವು ಮೂಡಬೇಕು.

**ಅಧ್ಯಯನದ ಮಹತ್ವ**

ಪರಿಸರದ ಬಗ್ಗೆ ಅರಿಯುವುದು ಎಷ್ಟು ಮುಖ್ಯ ಎಂದರೆ, ಒಂದು ಸಸ್ಯದ ಹೂವಿನಲ್ಲಿ ಪರಾಗಸ್ಪರ್ಶಕ್ರಿಯೆ ನಡೆಯುವುದು ದುಂಬಿಯಿಂದ, ಆದರೆ ಇಂದು ಅತಿಯಾದ ಲಾಭಕೋರತನದ ತಂತ್ರಜ್ಞಾನದ ಬಳಕೆಯಿಂದ ಆ ದುಂಬಿಗಳೇ ನಾಶವಾಗುತ್ತಲಿವೆ. ಸಸ್ಯ ಪ್ರಭೇಧಗಳಿಂದ ಕೂಡಿದ ಈ ಭೂಮಿ ತನ್ನೊಡನೆ ಹಲವಾರು ಜೀವ ಪ್ರಭೇಧಗಳನ್ನು ಒಳಗೊಂಡಿದೆ. ಆದರೆ ಒಂದು ಸ್ಥಳದಿಂದ ಸ್ಥಳಕ್ಕೆ ಇವು ಭಿನ್ನವಾಗಿರುತ್ತವೆ. ಅಲ್ಲದೆ ಪ್ರಕೃತಿ ಇದರಲ್ಲಿ ಸಮತೆಯನ್ನು ಕಾಯ್ದುಕೊಂಡು ಬಂದಿದೆ. ಅದೇ ಜೈವಿಕ ಆಹಾರ ಸರಪಳಿ. ಆದರೆ ಇಂದು ಪ್ರಕೃತಿ ವಿರುದ್ಧದ ಚಟುವಟುಕೆಗಳಿಂದ ಈ ಆಹಾರ ಸರಪಳಿ ಛಿದ್ರವಾಗುತ್ತಿದೆ.

ಉದಾಹರಣೆಗೆ ಬೆಳೆಗೆ ಸಿಂಪಡಿಸುವ ರಾಸಾಯನಿಕಗಳಿಂದ ಕೀಟಗಳು ಸಾಯುತ್ತವೆ. ಅದರಿಂದ ಕೆಲವು ಜೀವಿಗಳ ಆಹಾರ ಸರಪಳಿಯ ಕೊಂಡಿ ಕಳಚಿ ಬೀಳುತ್ತದೆ. ಮತ್ತು ಗಿಡಮರಗಳನ್ನು ಕಡಿಯುವುದರಿಂದ ಪಕ್ಷಿಗಳ ಸಂತಾನಕ್ರಿಯೆಗೆ ಅಡಚಣೆಯಾಗುತ್ತದೆ.

**ಪರಿಸರ ನಾಶದ ಬಗ್ಗೆ ಅರಿವು**

ಭವಿಷ್ಯದಲ್ಲಿ ಭೂಮಿಯನ್ನು ಉಳಿಸಿಕೊಳ್ಳಲು ನಾವು ವಹಿಸುವ ಮುಂಜಾಗರೂಕತೆಯ ಬಗ್ಗೆ ಅರಿವು ಮೂಡಿಸುವುದು. ಪರಿಸರ ರಕ್ಷಣೆಗೆ ಈಗ ನಡೆಯುತ್ತಿರುವ ಕಾರ್ಯಗಳ ಬಗ್ಗೆ ತಿಳಿಸುವುದು. ಪರಿಸರ ವರ್ಷದಿಂದ ವರ್ಷಕ್ಕೆ ಹೇಗೆ ಬರಿದಾಗುತ್ತಿದೆ ಎಂಬುದನ್ನು ನೋಡಬಹುದು.

ಇಂದು ಪರಿಸರ ಹೇಗೆ ದಿನದಿಂದ ದಿನಕ್ಕೆ ಮಾಲಿನ್ಯವಾಗುತ್ತಿದೆ, ಅದರಿಂದಾಗುವ ಪರಿಣಾಮಗಳು, ಇದು ಹೀಗೆ ಮುಂದುವರೆದರೆ ನಾಳಿನ ಪೀಳಿಗೆಯ ಗತಿ ಏನು? ಈ ಎಲ್ಲಾ ಅಂಶಗಳ ಬಗೆಗಿನ ಅರಿವನ್ನು ನಾವು ಹೊಂದಿರಬೇಕು. ನಾಗೇಶ ಹೆಗಡೆಯವರ ಲೇಖನಗಳಲ್ಲಿ ಯಾವ ಯಾವ ಬಗೆಯಲ್ಲಿ ಪರಿಸರಕ್ಕೆ ಹಾನಿಯಾಗುತ್ತಿದೆ. ಅದಕ್ಕೆ ಕಾರಣವಾದ ಅಂಶಗಳು ಏನು? ಎಂಬುದನ್ನು ಅಧ್ಯಯನ ಮಾಡುತ್ತೇವೆ.

ಉದಾಹರಣೆಗೆ ಬಟ್ಟೆ ತೊಳೆಯುವ ಸಾಬೂನಿನಿಂದ ನೀರಿನಲ್ಲಿರುವ ಜಲಚರಗಳಿಗೆ ಹಾನಿ. ಮೈನಿಂಗ್ ಮಾಡುವುದರಿಂದ ಕಾಡು ನಾಶವಾಗುವುದಲ್ಲದೆ. ಗಣಿಗಾರಿಕೆಗಳಲ್ಲಿ ಸಿಡಿಸುವ ಸಿಡಿಮದ್ದಿನಿಂದ ನೆಲಕ್ಕೆ ಹಾನಿಯಾಗುತ್ತದೆ. ಜಲಕ್ಕೆ ಹಾನಿಯಾಗುತ್ತದೆ ಈ ಎಲ್ಲಾ ಅಂಶಗಳನ್ನು ಅರಿಯಬಹುದು. ಒಂದು ಸಸ್ಯದ ಪರಾಗಸ್ಪರ್ಶ ಕ್ರಿಯೆ ನಡೆಯುವುದು ಒಂದು ದುಂಬಿಯಿಂದ, ಆದರೆ ಇಂದು ನಮ್ಮ ಮೊಬೈಲ್ ಬಳಕೆಯಿಂದ ಆ ದುಂಬಿಗಳೇ ನಾಶವಾಗುತ್ತಿವೆ.

ನಮ್ಮ ಪರಿಸರದಲ್ಲಿ ಪ್ರತಿದಿನ ಒಂದಲ್ಲ ಒಂದು ಬಗೆಯಲ್ಲಿ ಬದಲಾವಣೆಗಳು ನಡೆಯುತ್ತಲೇ ಹೋಗುತ್ತಿವೆ. ಅದರಿಂದ ಈ ಭೂಮಿಯ ಮೇಲೆ ವಾಸಿಸುವ ಎಲ್ಲಾ ಜೀವಿಗಳಿಗೂ ಹಾನಿಯಾಗುತ್ತಿರುವುದರಿಂದ ಈ ಬಗೆಯ ಎಚ್ಚರಿಕೆಗಳು ಬುದ್ಧಿ ಜೀವಿಯಾದ ಮಾನವನಿಗೆ ತುಂಬಾ ಅವಶ್ಯವಾಗಿದೆ.

ನಾವು ಪರಿಸರ ಕಾಳಜಿಯನ್ನು ಮಾಡುವಾಗ ಜಗತ್ತಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬದಲಾವಣೆಗಳು ನಡೆಯುತ್ತಿವೆ. ಇದಕ್ಕೆ ಯಾರೂ ಸಹ ಉತ್ತರಿಸಲು ನಿಶಕ್ತರಾಗುತ್ತಾರೆ. ನೆರೆಹಾವಳಿ, ಚಂಡಮಾರುತ ಇವುಗಳಿಂದ ಪರಿಸರಕ್ಕಾಗುವ ಹಾನಿ ಅಪಾರವಾಗಿದೆ.

“ರಾಜಸ್ಥಾನದ ಮರುಭೂಮಿ, ಉತ್ತರಾಖಂಡದ ಗುಡ್ಡಗಾಡು, ಹಿಮಾಚಲ ಪ್ರದೇಶದ ಹಿಮನಾಡು, ಬಿಹಾರದ ಬಯಲುಭೂಮಿ, ಮಧ್ಯಪ್ರದೇಶದ ಕಣಿವೆಕೊಳ್ಳ, ಉತ್ತರಪ್ರದೇಶದ ಜೌಗುಭೂಮಿ ಎಲ್ಲಾ ಕಡೆ ಜಡಿಮಳೆ, ಜಡಿನೆರೆ ನುಗ್ಗುತ್ತಿದೆ. ಇಂಡೋನೇಷ್ಯ, ಜಪಾನ್, ಚೀನಾ, ಪೆರು, ಕೆನ್ಯಾ ಅಲ್ಲೆಲ್ಲ ಇಂಥದ್ದೇ ಉತ್ಪಾತ ಸಂಭವಿಸುತ್ತಿವೆ. ಸುಂಟರಗಾಳಿ ಬರ, ಹಿಮಕುಸಿತ, ಕಾಡಿನ ಬೆಂಕಿಯಂಥ ದುರ್ಘಟನೆಗಳ ಸರಮಾಲೆ ಬೇರೆ. ನಮ್ಮಲ್ಲಿ ಗುಡ್ಡಬೆಟ್ಟಗಳಲ್ಲೂ ಜನಸಾಂದ್ರತೆ ಜಾಸ್ತಿ ಇರುವುದರಿಂದ ಮತ್ತು ಮಾಧ್ಯಮಗಳ ಕಾಲಕೆಳಗೆ ಭೂಮಿ ಕುಸಿದಿದ್ದರಿಂದ ಆತಂಕ, ಆಕ್ರಂದನ ಹೆಚ್ಚಿದೆ.”

ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ ಸಹ ಪರಿಸರದಲ್ಲಿನ ಬದಲಾವಣೆಗಳನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಸಮುದ್ರದ ತಾಪಮಾನ ಏರುತ್ತಿದೆ. ನೆಲದ ತಾಪಮಾನ ಏರುತ್ತಿದೆ, ಮೇಘಸ್ಫೋಟವಾಗುತ್ತಿದೆ, ಹಿಮಕರಗುತ್ತಿದೆ, ಚಂಡಮಾರುತಗಳು ಹೆಚ್ಚಾಗುತ್ತಿವೆ ಕಳೆದ ಐವತ್ತು ವರ್ಷಗಳಲ್ಲಿ ಪರಿಸರದಲ್ಲಾಗುವ ಬದಲಾವಣೆಯನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಪರಿಸರದ ಮೇಲೆ ನಿಜವಾದ ಕಾಳಜಿ ಇದ್ದರೆ ಈ ಭೂ ಕುಸಿತದಿಂದ ಮುಕ್ತರಾಗಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಪ್ರತಿವರ್ಷ ಮಳೆಗಾಲದಲ್ಲಿ ಅತಿವೃಷ್ಟಿ, ಇಲ್ಲವೆ ಅನಾವೃಷ್ಟಿಯನ್ನು ನಾವು ಕಾಣುತ್ತೇವೆ. ಏಕೆ ಈ ಮೇಘಸ್ಫೋಟವಾಗುತ್ತಿದೆ ಎಂದರೆ ನೆಲದ ತಾಪಮಾನ ಜಾಸ್ತಿಯಾದಾಗ, ಬಿಸಿಗಾಳಿ ಮೇಘವನ್ನು ಮೇಲಕ್ಕೆ ಎತ್ತುತ್ತದೆ. ಸಮುದ್ರದಿಂದ ಒತ್ತರಿಸಿಬರುವ ಮೋಡಗಳಿಗೆ ಮಳೆ ಸುರಿಸಲು ಆಗುವುದಿಲ್ಲ. ಅವು ಮೇಲಕ್ಕೆ ಹೋದಂತೆ ಇನ್ನಷ್ಟು ಮೋಡಗಳು ಒಟ್ಟಾಗಿ ತೂಕ ತಾಳಲಾರದೆ ಮಳೆಯಾಗಿ ಒಂದೇ ಸಮನೆ ಸುರಿದು ಮೇಘಸ್ಫೋಟವಾಗುತ್ತದೆ. ಇದಕ್ಕೆ ಹವಾಮಾನದ ಬದಲಾವಣೆಯೇ ಕಾರಣವಾಗುತ್ತದೆ.

ಅಷ್ಟೇ ಅಲ್ಲದೆ ನಾವು ಮಾಡುವ ಚಟುವಟಿಕೆಗಳು ಸಹ ಪರಿಸರದೊಂದಿಗೆ ಸದಾ ಹೋರಾಟವನ್ನು ಮಾಡುತ್ತಿರುವುದನ್ನು ಕಾಣುತ್ತೇವೆ.

"ನಗರಪ್ರದೇಶದಲ್ಲಿ ಬೀಳುವ ಜಡಿಮಳೆಯೆಂದರೆ ನಮ್ಮೆಲ್ಲರ ಕೊಳಕು ಕಚಡಾಗಳನ್ನು, ತೈಲದ ಜಿಡ್ಡು, ಕೆಮಿಕಲ್ ತ್ಯಾಜ್ಯಗಳನ್ನು ಹಳ್ಳಕೆರೆಗಳಿಗೆ ಸೇರಿಸುವ ಜಾಡಮಾಲಿ ಇದ್ದಹಾಗೆ. ಅಲ್ಲಿಇಲ್ಲಿ ಸಂದು ಗುಂದುಗಳಲ್ಲಿ ಸಿಲುಕಿಕೊಂಡಿದ್ದ ಪ್ಲಾಸ್ಟಿಕ್ ಕಚಡಾಗಳು ಆಷಾಢದ ಮುಂಚಿನಗಾಳಿಗೆ ಸಡಿಲಗೊಂಡು ಮೇಲೆದ್ದು ಹಾರುತ್ತಾ ಜಾರುತ್ತಾ ಮಳೆನೀರಿಗೆ ಸೇರಿ ಕೆರೆನೀರಿಗೆ ಹೂಳಾಗುತ್ತವೆ."

ದಿನದಿಂದ ದಿನಕ್ಕೆ ಪ್ಲಾಸ್ಟಿಕ್ ಬಳಕೆಯ ಪ್ರಮಾಣ ಹೆಚ್ಚಾಗುತ್ತಾ ಹೋಗುತ್ತಿದೆ. ಇದರಿಂದ ಪರಿಸರಕ್ಕೆ ಹಾನಿಯಾಗುತ್ತಾ ಇದು ಮುಗಿಯಲಾರದ ಕೊಳಕಾಗಿ ಇಂದು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇದು ಸಂಗ್ರಹವಾಗುತ್ತಿರುವುದನ್ನು ಕಾಣುತ್ತೇವೆ. ಈ ಪ್ಲಾಸ್ಟಿಕ್ ಕೊಳಕಿನಲ್ಲಿರುವ ಜಿಡ್ಡು ಕೆಮಿಕಲ್ ಜಲಮೂಲಗಳಿಗೆ ಸೇರುವುದರೊಂದಿಗೆ ಅಲ್ಲಿನ ಜಲಚರಗಳಿಗೂ ಸಹ ಹಾನಿಯನ್ನು ಮಾಡುತ್ತಿದೆ. ಅಲ್ಲದೆ ಇದು ಮಳೆನೀರಿನೊಂದಿಗೆ ಮುಂದೆ ಚಲಿಸಿ ಮತ್ತೊಂದು ಕೆರೆಯನ್ನು, ಕಾಲುವೆಗಳನ್ನು ಸೇರಿ ಅಲ್ಲಿ ಮತ್ತೆ ಹೂಳಾಗಿ ತುಂಬುವುದರೊಂದಿಗೆ ಪರಿಸರಕ್ಕೆ ಹಾನಿಯನ್ನು ಮಾಡುತ್ತಿದೆ.

"ಉತ್ತರ ಕರ್ನಾಟಕದ ಗುಲಬರ್ಗಾ, ವಿಜಯಪುರ, ಬಳ್ಳಾರಿ ಜಿಲ್ಲೆಗಳ ಜೊತೆಗೆ ಬೀದರ, ಚಿತ್ರದುರ್ಗ ಮತ್ತು ಬಾಗಲಕೋಟೆ ಜಿಲ್ಲೆಯ ಭಾಗದಲ್ಲಿ ಮರುಭೂಮಿಯ ಲಕ್ಷಣಗಳು ಕಾಣತೊಡಗಿವೆ ಎಂದು ಈಗಲ್ಲ, 1995ರಲ್ಲೇ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ಹೇಳಿದ್ದರು"

ಇಂದು ತಂತ್ರಜ್ಞಾನ ತುಂಬಾ ಮುಂದುವರೆದಿದೆ. ಉಪಗ್ರಹಗಳ ಚಿತ್ರಗಳು

ನಮಗೆ ಸಿಗುತ್ತಿರುವುದರಿಂದ ಈ ಭಾಗದಲ್ಲಿನ ಮರುಭೂಮಿಯ ಲಕ್ಷಣಗಳು ಹೆಚ್ಚಾಗಿ ಕಾಣಸಿಗುತ್ತಿವೆ. ಅದಕ್ಕೆ ಕಾರಣವೇನೆಂದರೆ ಈ ಪ್ರದೇಶದಲ್ಲಿ ಗಿಡ ಮರಗಳ ಪ್ರಮಾಣ ಕಡಿಮೆ ಇದೆ. ಸಣ್ಣಪುಟ್ಟ ಹುಲ್ಲಿನ ಜಾತಿಯ ಸಸಿಗಳನ್ನು ಕುರಿ ಮೇಕೆಗಳು ತಿನ್ನುತ್ತಿವೆ. ಅಲ್ಲದೆ ಅಲ್ಲಿನ ಜನ ಉರುವಲಿಗೂ ಸಹ ಬಳಸುತ್ತಿದ್ದಾರೆ. ಇದರಿಂದ ನೆಲದ ತೇವಾಂಶ ಇನ್ನು ಕಡಿಮೆಯಾಗುತ್ತಾ ಹೋಗುತ್ತಿದೆ. ಅಲ್ಲದೆ ಮರುಭೂಮೀಕರಣ ವೇಗವಾಗಿ ಸಾಗುತ್ತಿದೆ.

1995 ರಲ್ಲಿ ವಿಜ್ಞಾನಿಗಳು ಈ ವಿಚಾರವನ್ನು ಗಮನಕ್ಕೆ ತಂದಿದ್ದರೂ ಸಹ ನಾವು ಎಚ್ಚರವಾಗಲಿಲ್ಲವಾದಲ್ಲಿ ಮುಂದೆ ಮರುಭೂಮಿಯ ಅನುಭವವನ್ನು ನಾವು ಕಾಣಬೇಕಾಗುತ್ತದೆ. ಅಂದರೆ ಪರಿಸರದ ಮೇಲಿನ ಕಾಳಜಿಯನ್ನು ಹೆಚ್ಚಿಸುತ್ತಾ, ಗಿಡ ಮರಗಳನ್ನು ಬೆಳೆಸುವಲ್ಲಿ ನಾವು ನಿರತರಾಗದೇಹೋದರೆ ಹವಾಮಾನದಲ್ಲಿನ ಬದಲಾವಣೆಯ ದುರಂತವನ್ನು ಎದುರಿಸಬೇಕಾಗುತ್ತದೆ. ಇಂದು ನಾವು ಆ ಪ್ರದೇಶದ ಉಷ್ಣಾಂಶದ ಪ್ರಖರತೆಯನ್ನು ನೋಡಿದರೆ ಅಲ್ಲಿನ ಬೇಸಿಗೆ ಬೆಂಕಿಯ ಉಂಡೆಯಂತಾಗಿರುತ್ತದೆ. ಈಗಲಾದರೂ ನಾವು ಎಚ್ಚರಾಗಬೇಕಾಗಿದೆ.

ಇದು ಕೇವಲ 1995ರ ಮಾತಲ್ಲ ಇತ್ತೀಚೆಗೆ ನಮ್ಮ ವಿಜ್ಞಾನಿಗಳು ಮತ್ತೆ ಎಚ್ಚರಿಸುತ್ತಿದ್ದಾರೆ. "ಕೆಲವು ವಿಜ್ಞಾನಿಗಳು ತಮ್ಮ ಮಾಮೂಲು ನಿಯಂತ್ರಣ ರೇಖೆಯನ್ನು ಮೀರಿ ಗಂಭೀರ ಎಚ್ಚರಿಕೆ ನೀಡತೊಡಗಿದ್ದಾರೆ. ತಾಪಮಾನ ಈಗಿನಂತೆ ಮೆಲ್ಲಗೆ ಹೆಚ್ಚಾಗುವ ಬದಲು, ಹಠಾತ್ತಾಗಿ ಪೃಥ್ವಿಯ ಸಮತೋಲನದ ಯಾವುದೋ ಒಂದು ಆಯಾಮ ಹದತಪ್ಪಿ ಮಗುಚಿಕೊಳ್ಳಬಹುದು ಎನ್ನುತ್ತಿದ್ದಾರೆ. ಹಾಗೆಯೇ ಆದರೆ, ಈಗಿನ ಲೆಕ್ಕಾಚಾರದಂತೆ ಇನ್ನು ಮೂವತ್ತು ವರ್ಷಗಳಲ್ಲಿ 2 ಡಿಗ್ರಿ ಸೆಲ್ಸಿಯಸ್ ಬದಲು ಸರಾಸರಿ ತಾಪಮಾನ 4 ಡಿಗ್ರಿ ಅಥವಾ 5ಕ್ಕೂ ಏರಬಹುದು ಎನ್ನತೊಡಗಿದ್ದಾರೆ"

ಈ ರೀತಿ ಏನಾದರೂ ವಾತಾವರಣದಲ್ಲಿ ಬದಲಾವಣೆಗಳು ಆದರೆ ನಮ್ಮ ಯಾವ ತುರ್ತುಕ್ರಮಗಳೂ ಪ್ರಯೋಜನಕ್ಕೆ ಬರುವುದಿಲ್ಲ ಎಂಬುದು ವಿಜ್ಞಾನಿಗಳ ನಿಲುವು. ಹಾಗೇನಾದರೂ ಆದರೆ ಪೃಥ್ವಿ ತನ್ನನ್ನು ತಾನು ಸಂಭಾಳಿಸಿಕೊಳ್ಳುತ್ತಾ ನಾವು ಬಿಡುವ ಕಾರ್ಬನ್ ಹೊಗೆಯನ್ನು ಸಮುದ್ರದ ಕಡೆ ಕಳಿಸಿ ಅಲ್ಲಿನ ಜೀವಿಗಳ ಬಲಿತೆಗೆದುಕೊಳ್ಳುತ್ತಿರುವುದನ್ನು ಕಾಣಬಹುದು. ಆದರೆ ಮುಂದಿನ ಮೂವತ್ತು ವರ್ಷಗಳಲ್ಲಿ ಕಾರ್ಬನ್ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಿದರೆ ಮಾತ್ರ ಸಾಧ್ಯ. ಈ ಬಗೆಯ ಪರಿಸರದ ಅರಿವನ್ನು ಮಾಡಿದರೆ, ಅದಕ್ಕೆ ಜನ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಾಧ್ಯ. ಹೀಗೆ ನಾವು ನಮ್ಮ ಪರಿಸರದ ಬಗ್ಗೆ ಅರಿವನ್ನು ಮೂಡಿಸುತ್ತಾ ಹೋಗುವಲ್ಲಿ ಹಿಂಜರಿಯಬಾರದು ಹಾಗಿದ್ದಲ್ಲಿ ಮಾತ್ರ ಪರಿಸರವನ್ನು ಉಳಿಸಿ ಅದರಿಂದಾಗುವ ಹಾನಿಯನ್ನು ತಡೆಯಲು ಸಾಧ್ಯ. ಇರುವುದೊಂದೇ ಭೂಮಿ ಇದನ್ನು ಉಳಿಸಿಕೊಂಡಲ್ಲಿ ಎಲ್ಲಾ ಜೀವಿಗಳು ಇಲ್ಲಿ ಉಸಿರಾಡಲು ಸಾಧ್ಯ.

ನಮ್ಮ ಭೂಮಿಗೆ ಉಸಿರು ನೀಡಿರುವ ಕೆಲವು ತಾಣಗಳಲ್ಲಿ ನಮ್ಮ ಪಶ್ಚಿಮಘಟ್ಟಗಳು ಪ್ರಮುಖಪಾತ್ರವನ್ನು ವಹಿಸುತ್ತವೆ. ಇವುಗಳನ್ನು ರಕ್ಷಿಸಿಕೊಂಡಲ್ಲಿ

ಹವಾಮಾನದಲ್ಲಿನ ತೊಂದರೆಗಳನ್ನು ತಪ್ಪಿಸಲು ಸಾಧ್ಯ. ನಾಗೇಶ ಹೆಗಡೆಯವರು ಹೇಳುವಂತೆ "ಬರಲಿರುವ ನಮ್ಮ ಎಲ್ಲಾ ಹವಾಗುಣ ಸಂಬಂಧಿ ಸಂಕಟಗಳಿಂದ ಪಾರಾಗಬೇಕೆಂದರೆ ಪಶ್ಚಿಮಘಟ್ಟಗಳೊಂದೇ ನಮಗೆಲ್ಲ ಆಸರೆ ಎಂಬುದನ್ನು ನಾವು ಮನಗಾಣಬೇಕಿತ್ತು. ಇಡೀ ರಾಜ್ಯದ ಸಮತೋಲನ, ಹವಾಮಾನ ಸಮತೋಲನ, ಜಲಮೂಲಗಳೆಲ್ಲಾ ಈ ಪರ್ವತಮಾಲೆಯೇ ಕಾರಣವಾಗಿದೆ. ನದಿ ಬತ್ತಿದರೆ, ಸೆಕೆ ಹೆಚ್ಚಾದರೆ ಅಥವಾ ಋತುಮಾನಗಳ ಏರುಪೇರು ತೀರಾ ಜಾಸ್ತಿಯಾದರೆ ನಮಗೆ ಬಯಲುಸೀಮೆಯ ಭಣಗುಡುವ ಬಟಾಬಯಲಲ್ಲಿ ಯಾವ ಆಸರೆಯೂ ಸಿಗುವವುದಿಲ್ಲ. ಪಶ್ಚಿಮ ಘಟ್ಟಗಳನ್ನು ನಾವು ಸಂರಕ್ಷಣೆ ಮಾಡಿಕೊಂಡರೆ ಮಾತ್ರ ಮುಂದೆ ನಮ್ಮ ಸಂರಕ್ಷಣೆಗೆ ಅಲ್ಲಿಂದ ನೆರವು ಸಿಕ್ಕೀತೆಂಬುದು ಸರಕಾರ ಮನಗಾಣಬೇಕಿತ್ತು"

ನಮ್ಮ ದೇಶಕ್ಕೆ ಮಳೆಮಾರುತಗಳನ್ನು ತರುವ ಪ್ರಮುಖ ಮೂಲಗಳೆಂದರೆ ನಮ್ಮ ಪಶ್ಚಿಮ ಘಟ್ಟಗಳು. ಅವುಗಳು ನಮ್ಮ ಅನೇಕ ನದಿಗಳಿಗೆ ಜನ್ಮವನ್ನು ಸಹ ನೀಡಿವೆ. ಆದರೆ ಅತೀಯಾದ ಕೈಗಾರಿಕರಣದಿಂದ ನಮ್ಮ ಪಶ್ಚಿಮಘಟ್ಟಗಳ ಮೇಲೆ ದಾಳಿಗಳು ನಡೆಯುತ್ತಿರುವದರಿಂದ ಮುಂದೆ ನಾವು ಮಳೆ ಮಾರುತಗಳನ್ನೇ ತಡೆಯುತ್ತಿರುವಂತಾಗಿದೆ. ಕಾಡಿನ ನಾಶದಿಂದ ಪರಿಸರದ ಮೇಲೆ ದಾಳಿಗಳು ನಡೆಯುತ್ತಿರುವುದನ್ನು ಕಾಣುತ್ತೇವೆ.

ನಾವು ಪರಿಸರ ನಾಶದ ಮತ್ತೊಂದು ದೃವದಲ್ಲಿದ್ದೇವೆ. ನಾಗೇಶ ಹೆಗಡೆಯವರ ಅಪೂರ್ವ ಪಶ್ಚಿಮ ಘಟ್ಟ ಕೃತಿಯಲ್ಲಿ ದಾಂಡೇಲಿಯ ಕಾಗದ ಕಾರ್ಖಾನೆಯಿಂದ ಅರಣ್ಯ ನಾಶವಾಗಿದೆ. ಇದರಿಂದ ಅರಣ್ಯ, ಜೀವ ಮಂಡಲಗಳ ಮೇಲೆ ಅಪಾರ ಹಾನಿಯಾಗಿದೆ. ಬ್ರಿಟೀಷರು ನಮ್ಮ ದೇಶವನ್ನು ಆಳುತ್ತಿರುವಾಗ ಒಂದು ರೂಪಾಯಿಗೆ ಒಂದು ಟನ್ ಬಿದಿರನ್ನು ಲಾರಿಗೆ ತುಂಬಿ ತೆಗೆದರು. ಇದರಿಂದ ಅನಾದಿಕಾಲದಿಂದ ಬುಟ್ಟಿ ಹೆಣೆದು ಜೀವನಸಾಗಿಸುತ್ತಿದ್ದ ಮೇದರು ಒಂದು ಬೊಂಬಿಗೆ ಐದು ರೂಪಾಯಿ ನೀಡಬೇಕಾಗಿ ಬಂತು. ಇದರಿಂದ ಬುಟ್ಟಿ ಹೆಣೆಯುವ ವೃತ್ತಿಯಿಂದ ಹೊರಬಂದರು. ಆದರೆ ಈ ಕಾಗದ ಕಾರ್ಖಾನೆಗಳಿಂದ ಬರುವ ಕೊಳಕು ನೀರಿನಿಂದ ಜಲಮಾಲಿನ್ಯವಾಯಿತು. ಅಲ್ಲದೆ ಸರ್ಕಾರ ನೀಲಗಿರಿ ನಡುತೋಪುಗಳನ್ನು ಬೆಳೆಸಿ ಮತ್ತೆ ಪರಿಸರಕ್ಕೆ ಅಪಾಯವನ್ನು ತಂದುಕೊಂಡಿತು. ಕಾರಣ ನೀಲಗಿರಿ ಮತ್ತು ಅಕೇಸಿಯಾ ಬೆಳೆದ ಸ್ಥಳದಲ್ಲಿ ಜಾನುವಾರುಗಳಿಗೆ ಹುಲ್ಲು ಸಿಗದು. ಮತ್ತು ಹಕ್ಕಿ ಪಕ್ಷಿಗಳು ಸಹ ಅಲ್ಲಿ ಗೂಡುಕಟ್ಟಿ ಮೊಟ್ಟೆ ಮರಿಗಳನ್ನು ಮಾಡಲಾರವು. ಅರಣ್ಯಗಳ ನಾಶಕ್ಕೆ ನಾವು ಅಭಿವೃದ್ಧಿಯ ಹೆಸರಲ್ಲಿ ಕಟ್ಟುತ್ತಿರುವ ಅಣೆಕಟ್ಟುಗಳು ಸಹ ಕಾರಣವಾಗಿವೆ. ಶರಾವತಿ, ಕಾಳಿ, ಬೇಡ್ತಿ ಮುಂತಾದ ಅಣೆಕಟ್ಟುಗಳಿಂದ ಸಹ ನಮ್ಮ ಅರಣ್ಯ ನಾಶವಾಗುತ್ತಿರುವುದನ್ನು ಕಾಣುತ್ತೇವೆ. ಅರಣ್ಯ ನಾಶದಿಂದ ಕೆಲವು ಕಾಡುಪ್ರಾಣಿಗಳು ಅಳಿವಿನಂಚಿನಲ್ಲಿವೆ.

ಈ ಬಗೆಯ ಅರಿವಿನಲ್ಲಿ ಮಾನವನ ಚಟುವಟಿಕೆಗಳು ನಡೆದರೆ ಮಾತ್ರ

ಪರಿಸರವನ್ನು ಉಳಿಸಲು ಸಾಧ್ಯ. ಭೂಮಿಯ ತಾಪಮಾನ ಹೆಚ್ಚುತ್ತಾ ಹೋದರೆ ಜೀವಿಗಳ ಸ್ಥಿತಿ ವಿಪತ್ತಿಗೆ ಹೋಗುತ್ತದೆ. "ಪೃಥ್ವಿಯ ತತ್ತರ ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ರೂಪದಲ್ಲಿ ವ್ಯಕ್ತವಾಗುತ್ತಿವೆ. ಅಲಾಸ್ಕಾದಲ್ಲಿ ಕಳೆದ ಒಂದು ತಿಂಗಳಿಂದ ಕಾಳಿಚ್ಚು ಉರಿಯುತ್ತಿದ್ದು, ಹತ್ತು ಲಕ್ಷ ಹೆಕ್ಟೇರ್ಗೂ ಹೆಚ್ಚು ಅರಣ್ಯ ಪ್ರದೇಶ ಹಿಮದಲ್ಲಿ ಬೂದಿಯಾಗಿದೆ. ದಕ್ಷಿಣ ಮತ್ತು ಉತ್ತರ ಕೊರಿಯಾ ಎರಡೂ ಬರಗಾಲವನ್ನು ಎದಿರಿಸುತ್ತಿವೆ. ಜಾರ್ಜಿಯಾ ದೇಶದ ತಿಬಲಿಸಿಯಲ್ಲಿ ಅತಿವೃಷ್ಟಿಯಿಂದಾಗಿ ಮೃಗಾಲಯವೇ ಕೊಚ್ಚಿಹೋಗಿದೆ. ವಾಷಿಂಗ್ಟನ್ ಪ್ರಾಂತ್ಯದಲ್ಲಿ ಕಾಳ್ಗಿಚ್ಚು ನಿಯಂತ್ರಣಕ್ಕೆ ಬರುವ ಲಕ್ಷಣವೇ ಕಾಣುತ್ತಿಲ್ಲ. ಆಸ್ಟ್ರೇಲಿಯಾದ ಕೆಂಬಣ್ಣದ ಉಲುರು ಪರ್ವತ ಆಲಿಕಲ್ಲುಗಳ ಸತತ ಜಡಿತದಿಂದ ಬೆಳ್ಳಗಾಗಿದೆ. ಕ್ಯಾಲಿಫೋರ್ನಿಯಾದಲ್ಲಿ ಬರಗಾಲ ತೀವ್ರವಾಗುತ್ತಿದೆ. ಭಾರತದಲ್ಲಿ ಭೂಕುಸಿತ, ಅತಿವೃಷ್ಟಿ ಅನಾವೃಷ್ಟಿಗಳ ತಾಂಡವ ಆರಂಭವಾಗಿದೆ."

ಇದಕ್ಕೆ ಕಾರಣ ಭೂಮಿಯ ತಾಪಮಾನ, ಪ್ರತಿ ಬಾರಿಯೂ ಶೃಂಗಸಭೆ ನಡೆದಾಗಲೆಲ್ಲಾ ಭೂಮಿಯ ತಾಪಮಾನ ಕಡಿಮೆಮಾಡುವ ಬಗ್ಗೆ ಮಾತುಕತೆಗಳು ನಡೆಯುತ್ತವೆ. ಆದರೆ ರಾಜಕಾರಣಿಗಳು ಮತ್ತು ಉದ್ಯಮಿಗಳು ಒಂದಲ್ಲ ಒಂದು ಕಾರಣ ಹೇಳಿ ಅದನ್ನು ವಿಫಲಗೊಳಿಸುತ್ತಾರೆ. 2009 ರಲ್ಲಿ ಕೊಪೆನ್ ಹೇಗನ್ ಶೃಂಗಸಭೆಯ ಸಂದರ್ಭದಲ್ಲಿ ಸುಮಾರು 56 ಪತ್ರಿಕೆಗಳ ಮುಖಪುಟದಲ್ಲಿ " ಹೇಗಾದರೂ ಒಮ್ಮತಕ್ಕೆ ಬನ್ನಿ, ಪೃಥ್ವಿಯ ಮುಂದಿನ ಪೀಳಿಗೆಯನ್ನು, ಜೀವಕೋಟಿಯನ್ನು ಉಳಿಸಿ" ಎಂದು ಕರೆಕೊಟ್ಟರು. ಇದರಲ್ಲಿ ಧರ್ಮಗುರುಗಳು, ನ್ಯಾಯಾಧೀಶರು ವೈದ್ಯರು ಭೂಮಿಯ ಉಳವಿನ ಬಗ್ಗೆ ಚಿಂತೆಯನ್ನು ವ್ಯಕ್ತಪಡಿಸಿದ್ದಾರೆ.

ಅಂದರೆ ಭೂಮಿಯ ಈ ಸ್ಥಿತಿಗೆ ಕಾರಣ ವಾತಾವರಣದಲ್ಲಿ ಹೆಚ್ಚುತ್ತಿರುವ ತಾಪಮಾನ ಎಂಬುದನ್ನು ನಾವು ಅರಿಯಬೇಕಾಗಿದೆ. ಕಾಡಿನ ಬೆಂಕಿ ಸಹ ವಾತಾವರಣದಲ್ಲಿನ ತಾಪವನ್ನು ಹೆಚ್ಚಿಸುತ್ತಿದೆ, ಭೂಮಿ ಕೊಚ್ಚಿಹೋಗುತ್ತಿದೆ. ಮತ್ತೊಂದುಕಡೆ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ.

ಭೂಮಿಯ ಉಳಿವಿಗಾಗಿ ಪಣತೊಡಬೇಕು, ಸರ್ಕಾರಗಳು ತನ್ನ ಪ್ರಜೆಗಳ ಹಿತಕ್ಕೆ ತಾನು ಪಣತೊಡಲೇ ಬೇಕು ಎಂದಿದ್ದರೆ. ಭೂಮಿಯತಾಪಮಾನವನ್ನು ಕಡಿಮೆಮಾಡಲು ವಾಹನಗಳಲ್ಲಿ ಬದಲಾವಣೆಯಾಗಬೇಕು. ಹೊಗೆರಹಿತ ವಾಹನಗಳನ್ನು ಹೆಚ್ಚಿಸಬೇಕು. ಪೆಟ್ರೋಲ್ ವಾಹನಗಳು ಈ ಬಗೆಯ ಅನಾಹುತಗಳಿಗೆ ಕಾರಣವಾಗುತ್ತಿವೆ. ಇದನ್ನು ಬದಲಿಸುವ ನಿಟ್ಟಿನಲ್ಲಿ ದೇಶಗಳು ಚಿಂತಿಸಬೇಕು.

"1980 ರ ದಶಕದಲ್ಲಿ ಸಿಒಟು ಕುರಿತು ತನ್ನದೇ ಸಂಶೋಧನೆಗಳಿಗೆ ಧನಸಹಾಯವನ್ನು ಹಠಾತ್ತಾಗಿ ನಿಲ್ಲಿಸಿತು. ಬದಲಿಗೆ, ಪೆಟ್ರೋಲ್/ಡೀಸೆಲ್ ಹೊಗೆಗೂ ವಾತಾವರಣ ಕಾವೇರುವುದಕ್ಕೂ ಏನೇನು ಸಂಬಂಧ ಇಲ್ಲವೆಂದು ವಾದಿಸಬಲ್ಲವರಿಗೆ ಕುಮ್ಮಕ್ಕು ನೀಡತೊಡಗಿತು." 1977 ರಲ್ಲಿ ಹಿರಿಯ ವಿಜ್ಞಾನಿ 'ಜೇಮ್ಸ್ ಬ್ಲ್ಯಾಕ್' ಎಂಬಾತ ಹಿರಿಯ ವಿಜ್ಞಾನಿಗಳ ಎದುರು ಒಂದು ಭಾಷಣವನ್ನು ಮಾಡಿದ್ದ.

ಭೂಮಿಯ ಮೇಲೆ ಹೀಗೆ ಖನಿಜಗಳನ್ನು ಉರಿಸುತ್ತಾ ಹೋದರೆ ಮಾನವ ಮಾತ್ರವಲ್ಲ ಜೀವರಾಶಿಗಳಿಗೂ ಸಹ ಹಾನಿ ಉಂಟಾಗುತ್ತದೆ ಎಂದಿದ್ದರು. ಅಲ್ಲದೆ ಅಂದಿನ ದಿನಗಳಲ್ಲಿ ಲಭ್ಯವಿರುವ ವೈಜ್ಞಾನಿಕ ಮಾಹಿತಿಯನ್ನು ಸಂಗ್ರಹಿಸಿ ಮತ್ತೆ ಮರು ವರ್ಷ ಹವಾಮಾನ ಬದಲಾವನೆಯ ಬಗ್ಗೆ ಉಪನ್ಯಾಸವನ್ನು ನೀಡಿದ್ದರು. ಅಲ್ಲದೆ ಕೃಷಿಯನ್ನೇ ನಂಬಿದ್ದ ದೇಶಗಳು ಯಾವ ಬಗೆಯಲ್ಲಿ ಸಂಕಷ್ಟಕ್ಕೊಳಗಾದವು ಎಂಬುದನ್ನು ವಿವರಿಸಿದ್ದರು. ಅಲ್ಲದೆ ಮುಂದಿನ ದಿನಗಳಲ್ಲಿ ನಮ್ಮ ಭೂಮಿ ಬಹುದೊಡ್ಡ ಸಂಕಷ್ಟಕ್ಕೆ ಒಳಗಾಗಲಿದೆ ಎಂಬುದನ್ನು ತಿಳಿಸಿದ್ದರು. ಇದನ್ನರಿತ 'ಎಕ್ಸನ್ ' ಕಂಪನಿ 'ಸಿಒಟು' ಹೇಗೆ ಹೆಚ್ಚುತ್ತಿದೆ ಎಂದು ತಿಳಿಯಲು ತಾಂತ್ರಿಕ ಪರಿಕರಗಳನ್ನು ನೇಮಕ ಮಾಡಿಕೊಂಡಿತು. ಅದರ ಪರಿಣಾಮವಾಗಿ ಇದರ ಸಂಪೂರ್ಣ ವರದಿಯನ್ನು' ವಿಜ್ಞಾನಿ ರೋಜತ್ ಕೋಹೆನ್' ಎಂಬಾತ ಪ್ರಬಂಧ ರೂಪದಲ್ಲಿ ತಿಳಿಸಿದರು. ಆಗ ಮುಂದಿನ ಪೀಳಿಗೆಗೆ, ಜೀವ ಜಂತುಗಳಿಗೆ, ಕೃಷಿ ಉತ್ಪನ್ನಗಳಿಗೆ ಆಗುವ ಹಾನಿಯನ್ನು ಕಂಡು ಎಕ್ಸನ್ ಕಂಪನಿ ಹಣ ನೀಡುವುದನ್ನು ನಿಲ್ಲಿಸಿತು.

ಅಂದರೆ ನಾವು ಬಳಸುವ ವಾಹನಗಳು, ಯಂತ್ರಗಳು ನಮಗೆ ಅನಿವಾರ್ಯ, ಅವಲಂಬನೆ ಯಂತಾಗಿದೆ. ಆದರೆ ಪರಿಸರದ ವಿಚಾರಕ್ಕೆ ಬಂದರೆ ನಾವು ಬದಲಾವಣೆಯನ್ನು ಮಾಡಲೇ ಬೇಕು. ಕಾರಣ ಇರುವುದೊಂದೇ ಭೂಮಿ ಇಲ್ಲಿ ಎಲ್ಲಾ ಜೀವಿಗಳಿಗೂ ಬದುಕುವ ಹಕ್ಕಿದೆ ಎಂಬುದನ್ನು ಮರೆಯುವಂತಿಲ್ಲ.

ಇತ್ತೀಚಿನ ದಿನಗಳಲ್ಲಿ ಸುರಿಯುತ್ತಿರು ಅತಿವೃಷ್ಟಿ, ಅನಾವೃಷ್ಟಿ, ಭೂ ಕುಸಿತ ಇದಕ್ಕೆಲ್ಲಾ ಕಾರಣಗಳು ವಾತಾವರಣದಲ್ಲಿನ ಬದಲಾವಣೆ. ಅತೀಯಾದ ರಾಸಾಯನಿಕಗಳ ಬಳಕೆಯಿಂದ ನೆಲ, ಜಲ ಮೂಲಕ್ಕೆ ಹಾನಿಯಾಗುತ್ತಿರುವುದನ್ನು ಕಾಣುತ್ತೇವೆ.

ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಯಂತ್ರಗಳ ಬಳಕೆ ಪ್ರಾರಂಭವಾಗಿದೆ. ಆದರೂ ಸಹ ಇನ್ನೂ ಇದರ ಅರಿವನ್ನು ಮೂಡಿಸಬೇಕಾಗಿದೆ. ಕೃಷಿ ವಿಷ ಕೇವಲ ಆಹಾರ ಧಾನ್ಯಗಳಿಗೆ ಮಾತ್ರ ಹಾನಿಯನ್ನು ಮಾಡುತ್ತಿಲ್ಲ, ಎಲ್ಲಾ ಜಲಚರಗಳಿಗೆ, ಭೂಚರ ಜೀವಿಗಳಿಗೆ, ಮಣ್ಣಿಗೆ, ಗಾಳಿಗೆ ಹಾನಿಯನ್ನು ಮಾಡುತ್ತಿರುವುದನ್ನು ಕಾಣುತ್ತೇವೆ. ಇದರಿಂದ ಮುಕ್ತಿಹೊಂದಲು ಪರಿಸರದ ಬಗ್ಗೆ ಅರಿವನ್ನು ಮೂಡಿಸಬೇಕು. ಅದು ನಮ್ಮ ಕನ್ನಡ ಸಾಹಿತ್ಯದ ಮೂಲಕ ತಲುಪಿದರೆ ಇನ್ನಷ್ಟು ಪರಿಣಾಮಕಾರಿಯಾಗಿ ಫಲವನ್ನು ನಿರೀಕ್ಷಿಸಲು ಸಾಧ್ಯ.

ಒಟ್ಟಾರೆಯಾಗಿ ಎಲ್ಲಾ ಜೀವ ಜಂತುಗಳಿಗೆ ಭೂಮಿಯೇ ಆಸರೆ, ಇಲ್ಲಿ ಎಲ್ಲಾ ಜೀವಿಗಳಿಗೂ ಬದುಕುವ ಹಕ್ಕಿದೆ. ಎಲ್ಲಾ ಜೀವಿಗಳ ಬಗ್ಗೆ ಅರಿವಿರುವುದೂ ಸಹ ಮುಖ್ಯ. ಹಾಗಿದ್ದಲ್ಲಿ ಮಾತ್ರ ಭೂಮಿಯ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**

1. ನಾಗೇಶ ಹೆಗಡೆ, (2018), ಸೈನ್ಸ್ ಮತ್ತು ಪರಿಸರ ಸಿಂಚನ, ಬೆಂಗಳೂರು: ಭೂಮಿ ಬುಕ್ಸ್.
2. ನಾಗೇಶ ಹೆಗಡೆ, (2021), ನಡುಬಾಗದ ಪತ್ರಕರ್ತನ ನಡುರಾತ್ರಿಯ ಸ್ವಾಗತ, ಬೆಂಗಳೂರು: ಭೂಮಿ ಬುಕ್ಸ್.
3. ನಾಗೇಶ ಹೆಗಡೆ, (2016), ಭೋಗ ಪ್ರಳಯ, ಬೆಂಗಳೂರು: ಭೂಮಿ ಬುಕ್ಸ್.